ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 138-142
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕನ್ನಡದ ವಿಶಿಷ್ಟ ಕೃತಿ – ಚಾವುಂಡರಾಯನ 'ಲೋಕೋಪಕಾರಂ'

**ಡಾ. ಜ್ಯೋತಿ ಪ್ರಿಯಾ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಡಾ. ಪಿ. ದಯಾನಂದ ಪೈ–ಪಿ. ಸತೀಶ ಪೈ ಸರಕಾರಿ ಪ್ರಥಮ ದರ್ಜೆ ಕಾಲೇಜು, ರಥಬೀದಿ, ಮಂಗಳೂರು.

***Abstract:***
*'ಲೋಕೋಪಕಾರ' ಕೃತಿಯು ಕ್ರಿ. ಶ. 1025ರ ಸುಮಾರಿಗೆ ರಚಿತವಾದ ಒಂದು ಪ್ರಸಿದ್ಧವಾದ ಶಾಸ್ತ್ರ ಗ್ರಂಥವಾಗಿದೆ. ಇದನ್ನು ರಚಿಸಿದವನು ಚಾವುಂಡರಾಯನೆಂಬ ಕವಿ. ಈ ಗ್ರಂಥವನ್ನು 1950ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಶ್ರೀ ಎಚ್. ಶೇಷ ಅಯ್ಯಂಗಾರರು ನಾಲ್ಕು ಹಸ್ತಪ್ರತಿಗಳ ಸಹಾಯದಿಂದ ಈ ಗ್ರಂಥವನ್ನು ಸಂಪಾದಿಸಿದ್ದಾರೆ. ಈ ಗ್ರಂಥವು ಪ್ರಕಟಣೆಗೊಂಡಿದ್ದು, ಇದರಿಂದ ಹಲವಾರು ಉಪಯುಕ್ತ ಮಾಹಿತಿಗಳು ಕನ್ನಡಿಗರಿಗೆ ಲಭಿಸಿದೆ. ಹತ್ತನೇಯ ಶತಮಾನದ ಆದಿಯಲ್ಲಿ ಚಾವುಂಡರಾಯನು ಈ ಕೃತಿಯನ್ನು ರಚಿಸಿದ್ದಾನೆ. ಹೆಸರೇ ಸೂಚಿಸುವಂತೆ ಈ ಕೃತಿಯಲ್ಲಿ ಜನಸಾಮಾನ್ಯರಿಗೆ ಬೇಕಾಗುವ ಉಪಯುಕ್ತ ಮಾಹಿತಿಗಳು ಲಭಿಸುತ್ತವೆ. ಹತ್ತನೇ ಶತಮಾನದಲ್ಲಿ ಪಂಪ, ಪೊನ್ನ, ರನ್ನ ಮೊದಲಾದ ಕವಿಗಳು ಚಂಪೂವಿನಲ್ಲಿ ಪುರಾಣದ ಮತ್ತು ಧಾರ್ಮಿಕ ವಿಷಯಗಳನ್ನು ತಮ್ಮ ಕಾವ್ಯದ ವಸ್ತುವನ್ನಾಗಿಸಿ ಕೃತಿ ರಚನೆ ಮಾಡಿ ಪಂಡಿತ ವರ್ಗ ಹಾಗೂ ರಾಜ ಪ್ರಭುತ್ವವನ್ನು ಸಂತೋಷಗೊಳಿಸಲು ಕಾವ್ಯ ರಚನೆ ಮಾಡಿದರೆ, ಚಾವುಂಡರಾಯನು ಜನಸಾಮಾನ್ಯರಿಗೆ ಬೇಕಾಗುವ ಉಪಯುಕ್ತ ಮಾಹಿತಿಯನ್ನು ಹೇಳುವ ಕೃತಿಯನ್ನು ರಚನೆ ಮಾಡಿದನು. ಆತನಿಗೆ ಖಗೋಳಶಾಸ್ತ್ರ, ವಾಸ್ತುಶಾಸ್ತ್ರ, ಆಯುರ್ವೇದ, ಜಲಶಾಸ್ತ್ರ ಮುಂತಾದ ವಿಷಯಗಳ ಬಗ್ಗೆ ಆಳವಾದ ಜ್ಞಾನವಿರುವುದು ಇದರಿಂದ ತಿಳಿಯುತ್ತದೆ.*

***Keywords:*** *ಚಾವುಂಡರಾಯ, ಲೋಕೋಪಕಾರಂ, ಆಯುರ್ವೇದ, ಅಧಿಕಾರ, ಮಾಹಿತಿ*

## ಪೀಠಿಕೆ

ಚಾವುಂಡರಾಯನ 'ಲೋಕೋಪಕಾರ' ಕೃತಿಯು ಕನ್ನಡದ ಮಹತ್ವದ ಕೃತಿಗಳಲ್ಲಿ ಒಂದು. ಚಾಲುಕ್ಯರಾಜನ ಪೋಷಣೆಯಲ್ಲಿದ್ದ ಚಾವುಂಡರಾಯ ಬ್ರಾಹ್ಮಣ ವಂಶಕ್ಕೆ ಸೇರಿದವನೆಂದು ಉಲ್ಲೇಖಗಳಿಂದ ತಿಳಿದುಬರುತ್ತದೆ. ಈತನ ಊರು ಮುದಗಲ್. ಚಾವುಂಡರಾಯನು ಕೃತಿಯ ಆರಂಭದಲ್ಲಿ ಪ್ರಥಮ ಅಧಿಕಾರದಲ್ಲಿ "ಕವಿತಾವಿಳಾಸತನಯಂ, ಕವಿ ಕಾವ್ಯವಿಳಾಸನೆಂಬುದುದು ತಕ್ಕುದು" (ಪದ್ಯ.20, ಪು.4) ಎಂದು ತನ್ನ ಬಗ್ಗೆ ಹೇಳಿಕೊಂಡಿದ್ದಾನೆ. ಕವಿತಾವಿಳಾಸನ ಮಗನೆಂದು ತನ್ನ ಪರಿಚಯವನ್ನು ಪೀಠಿಕಾಭಾಗದಲ್ಲಿ ಹೇಳಿಕೊಂಡಿದ್ದಾನೆ.

> ***ಮೇದಿನಿಯುಪಕಾರಂ ಕಲಿ***
> ***ವೋದುಗಳೆನಿಕೊಳವನಲ್ಲಿ ನೆಲಸಿರ್ದು ಬುಧೋ॥***
> ***ಪಾದೇಯಮಾದ ದೂಸರಿ***
> ***ನಾಮದೊ ಲೋಕೋಪಕಾರಮೆನನ್ವರ್ಥಂ॥***
> **(ಪದ್ಯ 23)**

***Please cite this article as:*** ಜ್ಯೋತಿ ಪ್ರಿಯಾ. (2026). ಕನ್ನಡದ ವಿಶಿಷ್ಟ ಕೃತಿ – ಚಾವುಂಡರಾಯನ 'ಲೋಕೋಪಕಾರಂ'. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(1), 138–142

ಪೀಠಿಕೆಯ 23ನೆ ಪದ್ಯದಲ್ಲಿ ಆತನೇ ಹೇಳಿಕೊಂಡಿರುವಂತೆ ಈ ಕೃತಿಯು ಲೋಕೋಪಕಾರವಾಗಿದ್ದು ಮಹತ್ವದ್ದಾಗಿದೆ. ಇಲ್ಲಿ 'ಲೋಕೋಪಕಾರ' ಪದವು ಜನರನ್ನು ಕುರಿತಾದುದು. ಜನರಿಗೆ ತುಂಬಾ ಪ್ರಯೋಜನಕಾರಿಗಳಾಗಿರುವ ವಾಸ್ತು, ವೈದ್ಯ, ಆಯುರ್ವೇದ ಮೊದಲಾದ ಹಲವು ವಿಷಯಗಳು ಈ ಗ್ರಂಥದಲ್ಲಿ ಪ್ರತಿಪಾದಿಸಲ್ಪಟ್ಟಿರುವುದರಿಂದ ಕೇವಲ ನಾಮ (ಶಬ್ದ) ಮಾತ್ರದಿಂದಲ್ಲದೆ, ಅರ್ಥದಿಂದಲೂ ಕೂಡಿರುವುದರಿಂದ ಗ್ರಂಥಕರ್ತೃವು ಹೇಳಿರುವ ಅನ್ವರ್ಥವೆಂಬುದನ್ನು ಅರ್ಥೈಸಿಕೊಳ್ಳಬಹುದು.

'ಲೋಕೋಪಕಾರ' ಕೃತಿಯಲ್ಲಿ ಒಟ್ಟು ಹನ್ನೆರಡು ಅಧಿಕಾರಗಳಿದ್ದು (ಅಧ್ಯಾಯ), ಪ್ರತಿಯೊಂದು ಅಧಿಕಾರವು ಭಿನ್ನವಾಗಿದೆ. ಪ್ರಥಮಾಧಿಕಾರದಲ್ಲಿ 'ಪಂಚಾಂಗ ಫಲ ವರ್ಣನಂ' ಎಂಬ ವಿಷಯದ ಕುರಿತಾಗಿ ಹೇಳಿದ್ದಾನೆ. ಇದು ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಿಸಿದ್ದಾಗಿದೆ. ಮನುಷ್ಯನು ತಾನು ಮಾಡಬೇಕಾದ ಕಾರ್ಯಗಳು ಸುಸೂತ್ರವಾಗಿ ನಡೆಯಬೇಕಾದರೆ, ಇದಕ್ಕೆ ಅವಶ್ಯಕವಾಗಿ ಬೇಕಾಗುವ ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳು ಇವುಗಳ ಕುರಿತಾದ ಪಂಚಾಂಗ ಶುದ್ಧಿಯನ್ನು ವಿವರಿಸಲಾಗಿದೆ. ಯಾವ ದಿನ ಒಳ್ಳೆಯದು, ಯಾವ ದಿನ ಕೆಟ್ಟದ್ದು ಎನ್ನುವುದನ್ನು ವಿವರಿಸಿದ್ದಾನೆ. ಉದಾಹರಣೆಗೆ ಪದ್ಯ 4 ರಲ್ಲಿ 'ದ್ವಾದಶಿಯಲ್ಲಿ ಸೂರ್ಯನು, ಪಂಚಮಿಯಲ್ಲಿ ಕುಜನು, ಏಕಾದಶಿಯಲ್ಲಿ ಚಂದ್ರನು, ತದಿಗೆಯಲ್ಲಿ ಬುಧನು, ನೌಮಿಯಲ್ಲಿ ಶನಿಯು, ಷಷ್ಠಿಯಲ್ಲಿ ಗುರುವು, ಅಷ್ಟಮಿಯಲ್ಲಿ ಶುಕ್ರನು, ಇದ್ದರೆ ಅದು ದಗ್ಧವಾರ. ಆ ದಿನಗಳಲ್ಲಿ ಯಾವೊಂದು ಶುಭಕಾರ್ಯಗಳನ್ನು ಮಾಡಲಾಗದು' ಎಂದು ವಿವರಿಸಲಾಗಿದೆ. ಸೂರ್ಯಾದಿ ನವಗ್ರಹಗಳು ಯಾವ ಯಾವ ರಾಶಿಗಳಲ್ಲಿದ್ದರೆ ಶುಭವನ್ನು ಕೊಡುತ್ತವೆ ಎಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಿದ್ದಾನೆ.

ದ್ವಿತೀಯಾಧಿಕಾರದಲ್ಲಿ 'ನವಪಟಲಂ'ಗಳ ಬಗ್ಗೆ ವಿವರಿಸಲಾಗಿದೆ. ಮನುಷ್ಯನ ಬದುಕಿನಲ್ಲಿ ವಿವಾಹವು ಬಹು ಮುಖ್ಯ ಪಾತ್ರ ವಹಿಸುತ್ತದೆ. ಸಂಘಜೀವಿಯಾದ ಮನುಷ್ಯ ತನ್ನ ಸುಖದಾಂಪತ್ಯಕ್ಕೆ ಮುನ್ನುಡಿಯಾದ ವಿವಾಹವನ್ನು ಯಾವ ಶುಭದಿನಗಳಲ್ಲಿ ಮಾಡಿಕೊಂಡರೆ ಉತ್ತಮ ಹಾಗೂ ಆತ ಸುಖಿಯಾಗಿರಬಲ್ಲ ಎನ್ನುವುದರ ಕುರಿತಂತೆ ಇದರಲ್ಲಿ ವಿವರಿಸಲಾಗಿದೆ. ಈ ಅಧಿಕಾರದಲ್ಲಿ ಹೇಳಿರುವ ವಿಷಯಗಳಿಗೆ 'ಪಟಲ'ಗಳೆಂದು ಹೆಸರಿಟ್ಟು, ಅದರಲ್ಲಿ 'ವಿವಾಹಪಟಲಂ' ಭಾಗದಲ್ಲಿ ವಿವಾಹಕ್ಕೆ ಯೋಗ್ಯವಾದ ನಕ್ಷತ್ರಗಳು, ಲಗ್ನಗಳ ಬಗೆಗೆ ವಿವರಣೆ ನೀಡಲಾಗಿದೆ. ವರ್ಣಾಶ್ರಮ ಧರ್ಮಕ್ಕೆ ಸಂಬಂಧಿಸಿದಂತೆ ಷೋಡಶಕರ್ಮಗಳನ್ನು ನಡೆಸುವುದಕ್ಕೆ ಶುಭಕರವಾದ ತಿಥಿ, ಲಗ್ನಾಧಿಗಳನ್ನು ವಿವರಿಸಲಾಗಿದೆ. ಋತುಪಟಲಂ, ಸೀಮಂತಪುಂಸವನಪಟಲಂ, ಅನ್ನಪ್ರಾಶನ, ಚೌಲಕರ್ಮ, ಉಪನಯನ, ಸಮಾವರ್ತನ, ವನಪ್ರವೇಶ, ಬೀಜಾವಾಸ ಹೀಗೆ ಒಂಬತ್ತು ಪಟಲಂಗಳ ಬಗ್ಗೆ ವಿವರಣೆಯನ್ನು ನೀಡಿದ್ದಾನೆ. ಇದು ಚಾವುಂಡರಾಯನಿಗೆ ಇರುವ ಸಂಸ್ಕಾರಗಳ ಬಗೆಗಿನ ಆಳವಾದ ಜ್ಞಾನವನ್ನು ಹೇಳುವುದಲ್ಲದೆ, ಅವುಗಳನ್ನು ಯಾವ ಸಂದರ್ಭದಲ್ಲಿ ಮಾಡಿದರೆ ಒಳಿತು ಎನ್ನುವುದರ ಬಗೆಗಿನ ಆತನ ಅರಿವಿನ ಜ್ಞಾನವನ್ನು ತಿಳಿಯಬಹುದು.

ತೃತೀಯಾಧಿಕಾರವು 'ವಾಸ್ತುಶಾಸ್ತ್ರ'ಕ್ಕೆ ಸಂಬಂಧಿಸಿದುದು. ಮನುಷ್ಯನ ಮೂಲಭೂತ ಸೌಕರ್ಯಗಳಲ್ಲಿ ಒಂದಾದ ಮನೆಯ ಕುರಿತಂತೆ ತಿಳಿಸಲಾಗಿದೆ. ಇದು 'ವಾಸ್ತುಪ್ರಕರಣ'. ಮನೆಯನ್ನು ಕಟ್ಟಲಾರಂಭಿಸುವುದಕ್ಕೆ ಯಾವ ದಿನ ಶುಭ. ಶುಭ ತಿಥಿ, ನಕ್ಷತ್ರ, ಮನೆಗೆ ಉಪಯೋಗಿಸುವ ಮರಗಳ ಜಾತಿ ಸ್ವರೂಪ, ಪ್ರಶಕ್ತವಾದ ದಿಕ್ಕು, ಮನೆಯಲ್ಲಿ ಸ್ನಾನದ ಮನೆ, ಅಡುಗೆ ಮನೆ ಇರಬೇಕಾದ ಉದ್ದ–ಅಗಲಗಳ ಪ್ರಮಾಣ, ಬಾಗಿಲುಗಳನ್ನು ಇಡಲು ತಕ್ಕುದಾದ ಶುಭ ದಿನಗಳ ಬಗ್ಗೆ ವಿವರಿಸಲಾಗಿದೆ. ಅರಮನೆಯ ಕುರಿತೂ ಮಾಹಿತಿಯನ್ನು ನೀಡಿದ್ದಾನೆ. ಗೃಹಶಾಸ್ತ್ರದ ಬಗೆಗೆ ಉಲ್ಲೇಖ ಇದೆ.

ಚತುರ್ಥಾಧಿಕಾರದಲ್ಲಿ 'ಉತ್ಪಾತಾಧ್ಯಾಯಂ' ಎಂದು ವಿವರಿಸುತ್ತಾ ಅದರಲ್ಲಿ ಮನುಷ್ಯನಿಗೆ ಯಾವುದರಿಂದ ಪಾಪ ಹೆಚ್ಚುತ್ತದೆ, ಯಾವಾಗ ದೈವ ವಿಮುಖವಾಗುತ್ತದೆ ಎನ್ನುವುದರ ಕುರಿತಾದ ವಿವರಣೆ ಇದೆ. ಉಲ್ಕಾಪಾತಗಳ ಬಗೆಗಿನ ಮಾಹಿತಿ, ಕಾಮನ ಬಿಲ್ಲು ನೀರಿನಲ್ಲಿ ಕಾಣಿಸಿಕೊಂಡರೆ, ಮರದ ಮೇಲೆ ಕಾಣಿಸಿಕೊಂಡರೆ, ಭೂಮಿಯ ಮೇಲೆ ಕಾಣಿಸಿಕೊಂಡರೆ ಅದರ ಸೂಚನೆ ಏನು? ಎನ್ನುವುದನ್ನು ಹೇಳಿದ್ದಾನೆ. ಈ ಉತ್ಪಾತಗಳಿಗೆ ವರುಣನನ್ನು ಪೂಜಿಸಿ ಹೋಮ ಮಾಡಬೇಕು ಎಂದಿದ್ದಾನೆ. ವಾಸ್ತುವಿನ ಬಗೆಗೂ ಚಾವುಂಡರಾಯನಿಗಿದ್ದ ಅಪಾರ ಜ್ಞಾನವು ಇದರಿಂದ ತಿಳಿಯುತ್ತದೆ.

ಪಂಚಮಾಧಿಕಾರವು 'ಉದಕಾರ್ಗಳಂ'. ಅಂದರೆ ನೀರಿಗೆ ಸಂಬಂಧಿಸಿದ ಅಧ್ಯಾಯ. ಮನುಷ್ಯನಿಗೆ ನೀರು ಅತ್ಯಾವಶ್ಯಕವಾದ ವಸ್ತು. ಈ ಅಧ್ಯಾಯದಲ್ಲಿ ನೀರಿನ ಒರತೆ ಎಲ್ಲಿರುತ್ತದೆ ಎನ್ನುವುದರ ಕುರಿತಾದ ಮಾಹಿತಿ ಇದೆ. ಈ ಅಧಿಕಾರದ ಎರಡನೆಯ ಪದ್ಯದಲ್ಲಿ (ಪುಟ 75) 'ಅನುರಾಧೆ, ಹಸ್ತಂ, ಪುಷ್ಯಂ, ಧನಿಷ್ಠೆ, ಶತವಿಶಾಖೆ, ಉತ್ತರೆ, ಉತ್ತರಾಷಾಢ, ಉತ್ತರಾಭಾದ್ರಪದ ಈ ನಕ್ಷತ್ರಗಳಲ್ಲಿ ಜಲಾಧಿಪತಿಯಾದ ವರುಣನಂ ಶಾಸ್ತ್ರೋಕ್ತವಾಗಿ ಪೂಜಿಸಿ ಬಾವಿಗಳನ್ನು ತೋಡಿದರೆ ಜಲಸಿದ್ಧಿಯಾಗುತ್ತದೆ' ಎನ್ನುತ್ತಾನೆ. ಬಾವಿಗಳನ್ನು ಊರಿನ ಆಗ್ನೇಯ, ವಾಯುವ್ಯ ದಿಕ್ಕುಗಳನ್ನು ಬಿಟ್ಟು ಉಳಿದ ದಿಕ್ಕುಗಳಲ್ಲಿ ತೋಡಬೇಕು ಎನ್ನುತ್ತಾನೆ. ಮಾತ್ರವಲ್ಲದೆ ಯಾವ ಮರಗಳ ಸಮೀಪ ನೀರಿನ ಒರತೆ ಇರುತ್ತದೆ ಎನ್ನುವುದರ ಕುರಿತು ಮಾಹಿತಿಯನ್ನು ನೀಡಿದ್ದಾನೆ.

**ವೃಕ್ಷಾಯುರ್ವೇದ**

ಷಷ್ಠಾಧಿಕಾರವು ವೃಕ್ಷಾಯುರ್ವೇದಕ್ಕೆ ಸಂಬಂಧಿಸಿದುದು. ಮನುಷ್ಯನು ಪ್ರಕೃತಿ ಜೊತೆಗೆ ತನ್ನ ಬದುಕನ್ನು ನಡೆಸಬೇಕು. ಪ್ರಕೃತಿ ಇಲ್ಲದೆ ಆತ ಬದುಕಲಾರ. ಒಳ್ಳೆಯ ಗಾಳಿ, ನೀರು, ಬೆಳಕು ಇವುಗಳ ಜೊತೆಗೆ ಮನುಷ್ಯನಿಗೆ ಉತ್ತಮ ಹಣ್ಣುಗಳು, ಮರಗಳೂ ಆತನ ಬದುಕಿಗೆ ಪ್ರಮುಖವಾದ ಅಂಶಗಳು. ಈ ಅಧ್ಯಾಯದಲ್ಲಿ ಹಣ್ಣಿನ ಮರಗಳನ್ನು ನೆಡುವ ವಿಧಾನ, ಬೀಜ ಬಿತ್ತುವ ವಿಧಾನ ಮತ್ತು ಅವುಗಳು ಹೆಚ್ಚು ಫಲ ನೀಡುವಂತೆ ಯಾವ ಕ್ರಮಗಳನ್ನು ಅನುಸರಿಸಬೇಕು ಎನ್ನುವುದರ ಕುರಿತು ಮಾಹಿತಿಯನ್ನು ನೀಡಿದ್ದಾನೆ. ಆರಂಭದ ಪದ್ಯದಲ್ಲಿ ಬೀಜ ಬಿತ್ತಲು ಯಾವ ನಕ್ಷತ್ರಗಳು ಒಳ್ಳೆಯವು ಎಂದು ಹೇಳುತ್ತಾನೆ. ಶ್ರವಣ, ಮಘೆ, ಮೂಲ, ಚಿತ್ತ, ವಿಶಾಖೆ, ಮೃಗಶಿರೆ, ಹಸ್ತ ಈ ನಕ್ಷತ್ರಗಳು ಶಾಸ್ತ್ರೋಕ್ತವಾಗಿ ಬೀಜ ಬಿತ್ತನೆ ಮಾಡಲು ಯೋಗ್ಯವಾದ ನಕ್ಷತ್ರಗಳು. (ಪು. 86. ಪ. 2) ಈ ನಕ್ಷತ್ರಗಳಲ್ಲಿ ಬೀಜ ಬಿತ್ತನೆ ಮಾಡಿ ಸಿಂಗಾರ ತೋಟವನ್ನು ಮಾಡಬೇಕು ಎನ್ನುತ್ತಾನೆ. ಮರಗಳನ್ನು ನೆಡುವಾಗ ಗುಳಿಗಳ ಅಂತರ ಎಷ್ಟಿರಬೇಕು? ಯಾವ ರೀತಿಯ ಗೊಬ್ಬರ ಹಾಕಬೇಕು ಎನ್ನುವ ಜ್ಞಾನವನ್ನು ನಮಗೆ ನೀಡುತ್ತಾನೆ. ಒಂದೇ ಗಿಡದಲ್ಲಿ ಎರಡು ಬಗೆಯ ಹಣ್ಣುಗಳು ಬಿಡಲು ಅನುಸರಿಸಬೇಕಾದ ವಿಧಾನಗಳ ಕುರಿತು ಮಾಹಿತಿಯನ್ನು ನೀಡಿದ್ದಾನೆ. ಕಮಲ, ಕುಮುದ ಮೊದಲಾದ ನೀರಿನಲ್ಲಿ ಬೆಳೆಯುವ ಸಸ್ಯಗಳ ಗೆಡ್ಡೆಗಳನ್ನು ಕತ್ತರಿಸಿ, ಸೇರಿಸಿ ಆಜ್ಯಮಧುವನ್ನು ತೊಡೆದು, ಹರಿಣಾಮಿಷಜಲವನ್ನು ಬುಡಕ್ಕೆ ತಳಿದರೆ, ಒಂದೇ ಬಳ್ಳಿಯಲ್ಲಿ ಕಮಲ ಹಾಗೂ ಕುಮುದನೀಲೋತ್ಪಲ ಹೂಗಳು ಬಿಡುವುವು ಎಂದು ಹೇಳುತ್ತಾನೆ. ಕಸಿ ಕಟ್ಟುವ ವಿಧಾನವನ್ನು ಇಲ್ಲಿ ಚಾವುಂಡರಾಯ ವಿವರಿಸಿದ್ದಾನೆ. ಮಾವಿನಮರ ಇಮ್ಮಾವಿನ ಮರವಾಗುವ ಸಂಸ್ಕಾರ, ಬಾಳೆಯಹಣ್ಣು ದಾಳಿಂಬಹಣ್ಣಿನಂತಾಗುವ ಸಂಸ್ಕಾರ, ಹಲಸಿನ ಮರ ಬುಡದಿಂದ ತುದಿಯವರೆಗೂ ಹಣ್ಣು ಬಿಡುವ ಸಂಸ್ಕಾರ,(ಪು.93)ಇವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡಲಾಗಿದೆ.

ಮಲ್ಲಿಗೆ, ಜಾಜಿ ಮೊದಲಾದ ಬಳ್ಳಿಗಳಲ್ಲಿ ಹೆಚ್ಚು ಹೂ ಬಿಡುವಂತೆ ಮಾಡುವ ಸಂಸ್ಕಾರ, ದಾಸವಾಳದ ಕೆಂಪು ಹೂ ಬಿಳಿ ಹೂವಾಗುವಂತೆ ಹೇಗೆ

ಮಾಡುವುದು, ಮಲ್ಲಿಗೆ ಮತ್ತು ಜಾಜಿ ಬಳ್ಳಿಗಳಲ್ಲಿ ಒಂದು ಹೂವಿನ ಸುವಾಸನೆ ಮತ್ತೊಂದಕ್ಕೆ ಬರುವಂತೆ ಮಾಡುವುದು, ದುರ್ವಾಸನೆಯ ಹೂವಿನ ಗಿಡಗಳಲ್ಲಿ ಸುವಾಸನೆ ಬರುವಂತೆ ಮಾಡುವುದು, ತರಕಾರಿ ಗಿಡಗಳಲ್ಲಿ ಅಧಿಕ ಫಲವಾಗುವಂತೆ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವ ವಿವರಗಳನ್ನು ಬಹಳ ವಿಧಿವತ್ತಾದ ಕ್ರಮಗಳ ಮೂಲಕ ವಿವರಿಸಲಾಗಿದೆ.( ಪು.95–99).

ಸಪ್ತಮಾಧಿಕಾರವು 'ಗಂಧಯುಕ್ತಿ ಕ್ರಮಂ' ಎಂದು ವಿಭಾಗಿಸಿ ಅದರಲ್ಲಿ ಪರಿಮಳ ಗಂಧದ ಕುರಿತು ವಿವರಿಸಲಾಗಿದೆ. ಶ್ರೀಗಂಧ ಮತ್ತು ಕೋಷ್ಠ ಇವೆರಡನ್ನು ಒಟ್ಟಾಗಿ ತೇಯಲು ಬಕುಳದ ಪುಷ್ಪದ ಪರಿಮಳ ಬೀರುತ್ತದೆ(ಪು.101). ಶುಂಠಿ, ಮೆಣಸು, ಹಿಪ್ಪಲಿ, ಭದ್ರಮಸ್ತೆ, ಜೇನುತುಪ್ಪ, ಲವಂಗ, ಏಲಕ್ಕಿ, ರುದಂತಿ, ಕೊತ್ತಂಬರಿ ಇವೆಲ್ಲವನ್ನು ಚೂರ್ಣಮಾಡಿ ಸಮಭಾಗಿಯಾಗಿಕೊಂಡು ನೀರಿನಲ್ಲಿ ಕದಡಿ, ಮುಕ್ಕಳಿಸಿದರೆ ಮುಖಶುದ್ಧಿಯಾಗುತ್ತದೆ ಎಂದು ವರ್ಣಿಸಲಾಗಿದೆ. ಬಗೆಬಗೆಯ ಸುಗಂಧ ದ್ರವ್ಯಗಳ ತೈಲ, ದೇಹಧೂಪ, ಊದುಬತ್ತಿಗಳ ಕುರಿತು ವಿವರಿಸಲಾಗಿದೆ. ತಗಣಿ, ನೊರಜು ಮೊದಲಾದ ಕಚ್ಚುವ ಕ್ರಿಮಿಗಳನ್ನು ನಿವಾರಿಸುವ ಧೂಪಗಳ ಬಗ್ಗೆ, ಕಸ್ತೂರಿಯ ವಾಸನೆಯನ್ನು ಪಡೆಯುವ ಕ್ರಮದ ಹೇಳಲಾಗಿದೆ. ಕುಂಕುಮ ಕೇಸರಿ ಮಾಡುವ ಕ್ರಮ, ಕಸ್ತೂರಿಯನ್ನು ಮಾಡುವ ಕ್ರಮ, ಪಚ್ಚಕರ್ಪೂರ ಮಾಡುವ ಕ್ರಮ, ಇಂಗು ಮಾಡುವ ಕ್ರಮದ ಬಗ್ಗೆ ವಿವರಣೆ ಇದೆ.

ಅಷ್ಟಮಾಧಿಕಾರದಲ್ಲಿ 'ಸೂಪಶಾಸ್ತ್ರ'ದ ಬಗ್ಗೆ ಇದೆ. "ಭುವನದೊಳನ್ನಮಯ ಪ್ರಾಣವೆಂಬ, ಪೂರ್ವೋಕ್ತಮಾರ್ಗದಿಂ ಪ್ರಾಣಿಹಿತಾರ್ಥವಿದೆಂದು ಸೂಪಶಾಸ್ತ್ರ ಪ್ರವೀಣರಿ(ನಿ)ದನೆಸೆಯೆ ಪೇಳ್ದ ಕಾವ್ಯಾವಿಳಾಸಂ' ಎಂದು ಕಾವ್ಯದ ಆರಂಭದ ಪದ್ಯದಲ್ಲಿ ಅನ್ನದ ಮಹತ್ವವನ್ನು ವಿವರಿಸಿದ್ದಾನೆ. ಅನ್ನವನ್ನು ಮಾಡುವ ವಿಧಾನ, ಅದು ಕೆಡದಂತೆ ಇರಿಸುವ ವಿಧಾನದ ಕುರಿತು ವಿವರಿಸಲಾಗಿದೆ. ಉದ್ದಿನ ಬೇಳೆಯನ್ನು ಚೆನ್ನಾಗಿ ತೊಳೆದು ಅರೆದು ಮೊಸರಿನ ತಿಳಿನೀರಲ್ಲಿ ಕಲಸಿ, ಇಂಗು, ಜೀರಿಗೆ, ಕೊತ್ತಂಬರಿ, ಮೆಣಸು, ಇವೆಲ್ಲವನ್ನು ತದಕುಟ್ಟಿ, ಕಲಸಿ ಇಡ್ಡಲಿಗೆಯನಡಲ್ಕೆ ಕಂಪಂ ಕುಡುಗುಂ' (ಪದ್ಯ 11., ಪುಟ 122) ಎಂದು ವರ್ಣಿಸಲಾಗಿದೆ. ಸತ್ವಯುತವಾದ ಆಹಾರ, ಸಂಡಿಗೆ, ಮಾವಿನ ಕಾಯಿ, ಹಲಸಿನ ಹಣ್ಣಿನ ರುಚಿ ಹಾಗೂ ಕಹಿಯನ್ನು ನಿವಾರಿಸುವ ವಿಧಾನ ಇವೆಲ್ಲವನ್ನೂ ಕ್ರಮವಾಗಿ ಹೇಳಲಾಗಿದೆ.

ನವಮಾಧಿಕಾರದಲ್ಲಿ 'ನರಾಧಿವೈದ್ಯ ಪ್ರಕರಣಂ' ಬಗೆಗೆ ಹೇಳಲಾಗಿದೆ. ನರವೈದ್ಯವನ್ನು ಎಲ್ಲಾ ಜೀವರಕ್ಷಣಾರ್ಥಕವಾಗಿ ಹೇಳಲಾಗಿದೆ ಎಂದು ಆರಂಭದ ಪದ್ಯದಲ್ಲಿ ಹೇಳುತ್ತಾನೆ. ದೇಹಪುಷ್ಟಿಗೆ, ಶೂಲೆಗೆ, ಪಿತ್ತಶಾಂತಿಗೆ, ಕಾಮಾಲೆಗೆ, ಪಿತ್ತ ಜ್ವರಕ್ಕೆ, ಶೀತಕ್ಕೆ, ಸನ್ನಿವಾತಕ್ಕೆ, ತೃಷೆಗೆ(ಬಾಯಾರಿಕೆಗೆ), ಕ್ಷಯರೋಗಕ್ಕೆ, ಬುದ್ಧಿವರ್ಧನಕ್ಕೆ, ನರೆತಲೆಗೆ, ತಲೆನೋವಿಗೆ, ಕಿವಿನೋವಿಗೆ, ಕಣ್ಣುನೋವಿಗೆ, ಸ್ತ್ರೀಯರಿಗೆ ಕಾಡುವ ರೋಗಕ್ಕೆ, ಹೀಗೆ ವಿವಿಧ ರೋಗಗಳಿಗೆ ಉಪಶಮನದ ವಿಧಾನಗಳನ್ನು ತಿಳಿಸಿದ್ದಾನೆ. ದಶಮಾಧಿಕಾರದಲ್ಲಿ 'ವಿಷವೈದ್ಯ ಪ್ರಕರಣ' ಎಂದು ಹೇಳಲಾಗಿದೆ. ಇದರಲ್ಲಿ ವಿವಿಧ ಬಗೆಯ ವಿಷ ಸ್ವರೂಪಗಳನ್ನು ಹೇಳಿ, ಕೆಲವು ಪ್ರಾಣಿಗಳು ಕಚ್ಚಿದರೆ ಅದರ ವಿಷ ನಿವಾರಣೆಯ ವಿಧಾನಗಳನ್ನು ಹೇಳಲಾಗಿದೆ. ಹಾವು ಕಚ್ಚಿದರೆ, ಚೇಳುಕಚ್ಚಿದರೆ ಏನು ಮಾಡಬೇಕು ಎನ್ನುವುದರ ಬಗ್ಗೆ ಮಾಹಿತಿಯನ್ನು ನೀಡಿದ್ದಾನೆ.

ಏಕದಶಾಧಿಕಾರದಲ್ಲಿ "ಸರ್ವ ಲಕ್ಷಣ ಪರಿಜ್ಞಾನ ಪ್ರಕರಣ' ಎಂದು ಹೇಳಿ ಇದರಲ್ಲಿ ದೇಹದ ಅಂಗಗಳ ಲಕ್ಷಣಗಳನ್ನು ಹೇಳಿದ್ದಾನೆ. ಕಣ್ಣು, ಕಿವಿ, ಕೈ, ಕಾಲು, ತಲೆಗಳ ಲಕ್ಷಣಗಳನ್ನು ವಿವರಿಸಿದ್ದಾನೆ. ಸ್ತ್ರೀ ಲಕ್ಷಣ, ಗಜಲಕ್ಷಣ, ಅಶ್ವಲಕ್ಷಣ, ಮೃಗಲಕ್ಷಣ, ಗೋಲಕ್ಷಣ, ಕುಕ್ಕುಟ ಲಕ್ಷಣ, ಶಾಸ್ತ್ರ ಲಕ್ಷಣದ ಬಗೆಗೆ ಕ್ರಮವಾಗಿ ಹೇಳಲಾಗಿದೆ. ದ್ವಾದಶಾಧಿಕಾರದಲ್ಲಿ 'ಶಕುನಾದಿ ಪ್ರಕರಣ'ದ ಕುರಿತು ವಿವರಿಸಲಾಗಿದೆ. ಶುಭ

ಶಕುನಗಳು, ಬೆಕ್ಕಿನ ಶಕುನ, ಪಕ್ಷಿಯ ಶಕುನ, ಹಲ್ಲಿಯ ಶಕುನ, ಆನೆಯ ಶಕುನ, ಅಶ್ವದ ಶಕುನ, ಶುನಕನ ಶಕುನ, ಸಾಮಾನ್ಯ ಶಕುನ ಇತ್ಯಾದಿ ಶಕುನದ ಬಗೆಗೂ ಈ ಕೃತಿಯಲ್ಲಿ ವಿವರಿಸಲಾಗಿದೆ. ಒಟ್ಟಿನಲ್ಲಿ ಈ ಕೃತಿಯು ಎಲ್ಲಾ ವಿಷಯಗಳನ್ನು ಒಳಗೊಂಡ ಒಂದು ಮಹತ್ವದ ಕೃತಿ. ಇಲ್ಲಿ ವೈದ್ಯ, ಜ್ಯೋತಿಷ್ಯ, ಆರೋಗ್ಯ, ಆಹಾರ, ವಾಸ್ತು ಶಾಸ್ತ್ರ ಇವೆಲ್ಲರ ಬಗೆಗೂ ಮಾಹಿತಿ ಹಾಗೂ ಮಹತ್ವದ ವಿಚಾರಗಳು ನಮಗೆ ದೊರೆಯುತ್ತದೆ.

**ಉಪಸಂಹಾರ**

ಚಾವುಂಡರಾಯನ 'ಲೋಕೋಪಕಾರಂ' ಕೃತಿಯು ಹೆಸರೇ ಸೂಚಿಸುವಂತೆ ಲೋಕದ ಜನರಿಗೆ ಮಾಹಿತಿಯನ್ನು ನೀಡುವ ಒಂದು ಗ್ರಂಥ. ಇದು ಕೇವಲ ಒಂದು ವಿಷಯದ ಕುರಿತು ಮಾಹಿತಿಯನ್ನು ಮಾತ್ರ ನೀಡದೆ, ಮನುಷ್ಯ ತಾನು ಬದುಕಬೇಕಾದ ಪರಿಸರ ಹಾಗೂ ಆತ ತನ್ನ ಜೀವನದಲ್ಲಿ ಅಳವಡಿಕೊಳ್ಳಬೇಕಾದ ಸಂಸ್ಕಾರಗಳು, ಆತ ತನ್ನ ಜೀವನೋಪಾಯಕ್ಕಾಗಿ ಅವಲಂಬಿಸಿರುವ ನೀರು, ಅದರ ಮಹತ್ವ, ಪ್ರಕೃತಿ, ಮರ, ಗಿಡ, ಬಳ್ಳಿ ಇವುಗಳ ಜೊತೆಗೆ ಆತನ ಬದುಕು ಮತ್ತು ಆ ಗಿಡಗಳನ್ನು ಹೇಗೆ ನೆಡಬೇಕು ಮತ್ತು ಯಾವ ರೀತಿ ಮುಂಜಾಗ್ರತೆಗಳನ್ನು ತೆಗೆದುಕೊಂಡು ಬೆಳೆಸಬೇಕು ಎನ್ನುವುದರ ಕುರಿತಾದ ವಿವರಣೆ ಇದೆ. ಸಸ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ವೈಜ್ಞಾನಿಕ ಅಂಶಗಳನ್ನು ಚಾವುಂಡರಾಯ ಹತ್ತನೇ ಶತಮಾನದಲ್ಲಿಯೇ ತನ್ನ ಕೃತಿಯ ಮೂಲಕ ಅದನ್ನು ವಿವರಿಸಿದ್ದಾನೆ. ಇದರಿಂದ ಚಾವುಂಡರಾಯ ಕೇವಲ ಕವಿ ಮಾತ್ರವಲ್ಲ, ಒಬ್ಬ ಖಗೋಳ ಶಾಸ್ತ್ರ, ಸಸ್ಯಶಾಸ್ತ್ರವನ್ನು ಬಲ್ಲ ಮೇಧಾವಿಯಾಗಿಯೂ ನಮಗೆ ಗೋಚರಿಸುತ್ತಾನೆ. ಆತ ಕೇವಲ ಒಬ್ಬ ಕವಿ ಮಾತ್ರವಲ್ಲ, ಆತ ವಾಸ್ತುಶಾಸ್ತ್ರ, ಜ್ಯೋತಿಷಿ, ಆಯುರ್ವೇದ ಬಲ್ಲ ಪಂಡಿತ. ಅನ್ನದ ಮಹತ್ವ, ದೇಹದ ಅಂಗಗಳ ಬಗೆಗೆ, ಶಕುನಗಳ ಬಗ್ಗೆ ತಿಳಿದಿರುವ ಒಬ್ಬ ಮಹಾಮೇಧಾವಿಯೂ ಹೌದು. ಕನ್ನಡದ ಸಾಹಿತ್ಯದ ಇತಿಹಾಸದಲ್ಲಿ ಗೋಮಟೇಶ್ವರ ಮೂರ್ತಿಯನ್ನು ಕೆತ್ತಿದ ಚಾವುಂಡರಾಯನ ಬಗ್ಗೆ ಮಾತ್ರ ನಾವು ಹೆಚ್ಚಾಗಿ ತಿಳಿದಿದ್ದೇವೆ. ಅವನು 'ಚಾವುಂಡರಾಯ ಪುರಾಣ'ವನ್ನು ಬರೆದು ರನ್ನನಿಗೆ ಸಾಹಿತ್ಯ ಪೋಷಕನಾಗಿ ಕಂಡುಬರುತ್ತಾನೆ. ಆದರೆ 'ಲೋಕೋಪಕಾರಂ' ಕೃತಿಯನ್ನು ಬರೆದ ಚಾವುಂಡರಾಯನ ಕಾಲವನ್ನು ಕವಿಚರಿತೆಕಾರರು ಕ್ರಿ.ಶ 1025 ಎಂದು ಊಹಿಸಿದ್ದಾರೆ. (ಪು. xxi). ಕಂದ ಪದ್ಯಗಳೇ ಹೆಚ್ಚಾಗಿರುವ ಈ ಕಾವ್ಯದಲ್ಲಿ ಅಲ್ಲಲ್ಲಿ ಖ್ಯಾತಕರ್ನಾಟಕ ವೃತ್ತಗಳನ್ನು ಕಾಣಬಹುದು. ಪ್ರತೀ ಅಧಿಕಾರದ ಕೊನೆಯಲ್ಲಿ 'ಶ್ರೀ ಮಚ್ಚಾವುಂಡರಾಯ ವಿರಚಿತಮಪ್ಪ ಲೋಕೋಪಕಾರದೊಳ್' ಎನ್ನುತ್ತಾ ತನ್ನ ಹೆಸರಿನೊಂದಿಗೆ ಕೃತಿಯ ಹೆಸರನ್ನು ಹೇಳಿ ಆ ಅಧಿಕಾರವನ್ನು ಮುಗಿಸಿದ್ದಾನೆ. ಆತನೇ ಹೇಳುವಂತೆ ಈ ಕೃತಿಯ ಹೆಸರು 'ಲೋಕೋಪಕಾರ' ಎನ್ನುವುದು ಅನ್ವರ್ಥವಾಗಿದೆ. ಇಲ್ಲಿ ಮನುಷ್ಯನಿಗೆ ಅಗತ್ಯವಾದ ಎಲ್ಲಾ ವಿಷಯಗಳ ಕುರಿತಾದ ಮಾಹಿತಿಗಳು ಇವೆ. ಹಾಗಾಗಿಯೇ ಚಾವುಂಡರಾಯ 'ಲೋಕೋಪಕಾರಮೆನನ್ವರ್ಥಂ' ಎಂಬ ಸಾಲುಗಳನ್ನು ಕಾವ್ಯದ ಪೀಠಿಕಾಭಾಗದಲ್ಲಿ ಬಳಸಿದ್ದಾನೆ. ಒಟ್ಟಿನಲ್ಲಿ ಈ ಕಾವ್ಯವು ಸಮಗ್ರ ಮಾಹಿತಿಯನ್ನು ಒಳಗೊಂಡ ಮಹತ್ವದ ಕೃತಿ ಎನ್ನಬಹುದು. ಲೋಕೋಪಕಾರಂ ಸಮಾಪ್ತಂ.

ಆಕರ ಗ್ರಂಥ


1. ಶೇಷ ಐಯ್ಯಂಗಾರ್, ಎಚ್. (ಸಂ.) (1950). *ಲೋಕೋಪಕಾರಂ.* ಗವರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಸ್ ಲೈಬ್ರರಿ.


**ಪರಾಮರ್ಶನ ಗ್ರಂಥಗಳು**


- ಮುಗಳಿ, ರಂ.ಶ್ರೀ. (2007). *ಕನ್ನಡ ಸಾಹಿತ್ಯ ಚರಿತ್ರೆ.* ಗೀತಾ ಬುಕ್ ಹೌಸ್.
- ದೀಕ್ಷಿತ್, ಜಿ.ಎಸ್. ಉಲ್ಲೇಖನೀಯ ಆಕರ ಗ್ರಂಥ ಚಾವುಂಡರಾಯನ 'ಲೋಕೋಪಕಾರ'. *ಇತಿಹಾಸ ದರ್ಶನ:*